**1ನೇ ಹೆಚ್ಚುವರಿ ಜಿಲ್ಲಾ ಮತ್ತು ಎಂ.ಎ.ಸಿ.ಟಿ. ನ್ಯಾಯಾಲಯ,**

**ಮಡಿಕೇರಿ-ಕೊಡಗು**

**ಎಂ.ವಿ.ಸಿ ಸಂಖ್ಯೆ: 122/2023**

**RW-1**

**ಸಾಕ್ಷಿಯನ್ನು ದಿನಾಂಕ 20-02-2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**Witness present stepped in to witness box and filed his affidavit as chief examination and confirms the contents of the affidavit is as per his say and the affidavit is under his signature. Hence, the affidavit is treated as chief examination as RW-1.**

**ಮುಖ್ಯವಿಚಾರಣೆ: ಎದುರುದಾರರ ಪರ ಶ್ರೀಮತಿ. ಎ.ಬಿ ವಕೀಲರಿಂದಃ**

1. ನಾನು ನನ್ನ ಮುಖ್ಯವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳು ನನ್ನ ನಂಬಿಕೆ ಮತ್ತು ಜ್ಞಾನಕ್ಕೆ ಸಂಬಂಧಪಟ್ಟಂತೆ ನಿಜ ಇರುತ್ತದೆ. ಈ ಅರ್ಜಿಯಲ್ಲಿ ನಾನು ಹಾಜರು ಪಡಿಸಿದ ದಾಖಲೆಗಳನ್ನು ನಿಶಾನೆಗಳಾಗಿ ಗುರುತಿಸಬೇಕಾಗಿ ವಿನಂತಿಸುತ್ತೇನೆ. ಸಾಕ್ಷಿ ಹಾಜರು ಪಡಿಸಿದ ದಾಖಲೆಗಳನ್ನು ಈ ಕೆಳಗಿನಂತೆ ಗುರುತಿಸಲಾಯಿತು.

| | |
|---|---|
| Certified copy of the Motor Survey Report (8 pages) | ನಿಆರ್-1 |
| Certified copy of the Insurance Policy | ನಿಆರ್-2 |

**ಪಾಟೀಸವಾಲು- ಅರ್ಜಿದಾರರ ಪರ ಶ್ರೀ ಸಿ.ಟಿ.ಜೆ ವಕೀಲರಿಂದಃ**

2. ನಿಆರ್-1 ನ್ನು ನಾನು ತಯಾರಿಸಿಲ್ಲ ಎಂದರೆ ಸರಿ. ಸದರಿ ನಿಆರ್-1 ನ್ನು IRDI ನಿಂದ ಪರವಾನೆಗೆ ಪಡೆದ ನಿಪುಣರು ಮಾಡಿರುತ್ತಾರೆ. ಅಪಘಾತಕ್ಕಿಡಾದ ವಾಹನದ ರಿಪೇರಿ ಖರ್ಚು ರೂ. 2,41,220/- ಎಂದರೆ ಸರಿ. ಮಾಂಡೋವಿ ಮೋಟಾರ್ಸ್ ನಲ್ಲಿ ರಿಪೇರಿ ಮಾಡಿಸಲಾಗಿರುತ್ತದೆ ಎಂದರೆ ಸರಿ. ಮಾಂಡೋವಿ

ಮೋಟಾರ್ಸ್ ನಲ್ಲಿ ಅಪಘಾತಕ್ಕೀಡಾದ ವಾಹನ ಇದ್ದಾಗ ಸದರಿ ನಿಆರ್-1 ನ್ನು ತಯಾರಿಸಲಾಗಿತ್ತು ಎಂದರೆ ಸರಿ. ಸಾಕ್ಷಿಗೆ ಈಗ ನಿಪಿ-8 ನ್ನು ತೋರಿಸಿ ಸದರಿ ದಾಖಲೆಯನ್ನು ಮಾಂಡೋವಿ ಮೋಟಾರ್ಸ್ ನಲ್ಲಿ ಅವರು ತಯಾರಿಸಿ ನೀಡಲಾದ ದಾಖಲೆ ಎಂದರೆ ಸರಿ. ಸದರಿ ದಾಖಲೆಗೆ ನನ್ನ ತಕರಾರು ಇಲ್ಲ ಎಂದರೆ ಸರಿ. ಅಪಘಾತಕ್ಕೀಡಾದ ವಾಹನಕ್ಕೆ ರಿಪೇರಿ ಖರ್ಚು ಸುಮಾರು ರೂ. 2,41,220/- ಗಳನ್ನು ಅರ್ಜಿದಾರರು ನೀಡಿರುತ್ತಾರೆ ಎಂದರೆ ಸರಿ. ಆದ್ದರಿಂದ ನಿಆರ್-1ನ್ನು ತಯಾರಿಸಿದ ಸರ್ವೇ ದಾಖಲೆಯು ಸರಿಯಲ್ಲ ಎಂದರೆ ಸಾಕ್ಷಿಯ ಷರತ್ತು ಮತ್ತು ನಿಬಂಧನೆಗಳ ಮೇಲೆ ಅವುಗಳನ್ನು ತಯಾರಿಸಿರುತ್ತಾರೆ ಎಂದು ನುಡಿಯುತ್ತಾರೆ. ಅಪಘಾತಕ್ಕೀಡಾದ ವಾಹನಕ್ಕೆ ಕಡಿಮೆ ವಿಮೆ ಹಣವನ್ನು ನೀಡುವ ಸಲುವಾಗಿ ನಾವು ನಿಆರ್-1 ನ್ನು ಹೇಳಿ ಬರೆಸಿದ್ದೇವೆ ಎಂದರೆ ಸರಿಯಲ್ಲ. ನಿಪಿ-8 ರಲ್ಲಿನ ರೂ. 2,41,220/- ನ್ನು ನಾನು ಕೊಡಲು ಬಾಧ್ಯಸ್ತರು ಎಂದರೆ ಸಾಕ್ಷಿಯು ಅರ್ಜಿದಾರರು ಈಗಾಗಲೇ ಷರತ್ತು ಮತ್ತು ನಿಬಂಧನೆಗಳೊಂದಿಗೆ ವಿಮೆ ಹಣವನ್ನು ನೀಡಲಾಗಿರುತ್ತದೆ ಎನ್ನುತ್ತಾರೆ.

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-XXX

1ನೇ ಹೆಚ್ಚುವರಿ ಜಿಲ್ಲಾ ಮತ್ತು ಎಂ.ಎ.ಸಿ.ಟಿ.ನ್ಯಾಯಾಧೀಶರು,
ಕೊಡಗು-ಮಡಿಕೇರಿ.